**ವಿದೇಶಕ್ಕೆ ನೀಡುವ ಖಾಸಗಿ ಭೇಟಿಗಳಿಗೆ ವಿದೇಶೀ ವಿನಿಮಯದ ಬಿಡುಗಡೆಯಲ್ಲಿ ಹೆಚ್ಚಳ**

ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 51 ನವೆಂಬರ್ 18, 2002

ಗೆ,

ವಿದೇಶೀ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಕ್ತಿಗಳು (APs)

ಮಾನ್ಯರೇ,

**ವಿದೇಶಕ್ಕೆ ನೀಡುವ ಖಾಸಗಿ ಭೇಟಿಗಳಿಗೆ ವಿದೇಶೀ ವಿನಿಮಯದ ಬಿಡುಗಡೆಯಲ್ಲಿ ಹೆಚ್ಚಳ**

ಭಾರತದ ಸರ್ಕಾರದ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 381 (ಇ) ದಿನಾಂಕ ಮೇ 3, 2000ದ ಅನುಸೂಚಿ 111ರ 2ನೇ ಸಂಖ್ಯೆ ಬಾಬಿನ ಅನ್ವಯ ಯಾವುದೇ ದೇಶಕ್ಕೆ (ನೇಪಾಳ ಮತ್ತು ಭೂತಾನ್ ಹೊರತುಪಡಿಸಿ) ಒಂದು ಅಥವಾ ಹೆಚ್ಚು ಭೇಟಿಗಳನ್ನು ನೀಡುವುದಕ್ಕೆ ಒಂದು ಕ್ಯಾಲೆಂಡರ್ ವರ್ಷದಲ್ಲಿ ನಿವಾಸಿ ವ್ಯಕ್ತಿಗಳಿಗೆ 5000 ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊತ್ತವನ್ನು ಅಥವಾ ಮೀರಿದ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಲು ಅಧಿಕೃತ ವ್ಯಕ್ತಿಗಳು (APs) ರಿಸರ್ವ್ ಬ್ಯಾಂಕಿನ ಪೂರ್ವ ಅನುಮತಿ ಪಡೆಯಬೇಕೆಂದು ಅಗತ್ಯಪಡಿಸಲಾಗಿದೆ.

2. ಮತ್ತಷ್ಟು ಉದಾರೀಕರಣದ ಕ್ರಮವಾಗಿ, ಮೇಲಿನ ಮಿತಿಯನ್ನು 10,000 ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊತ್ತಕ್ಕೆ ಹೆಚ್ಚಿಸಲಾಗಿದೆ. ಮೇಲಿನ ಮಿತಿಯನ್ನು ಮೀರಿದ ವಿದೇಶೀ ವಿನಿಮಯ ಬಿಡುಡೆಗಾಗಿ ಸಲ್ಲಿಸುವ ಅರ್ಜಿಗಳನ್ನು ಅಧಿಕೃತ ವ್ಯಕ್ತಿಗಳ ಮೂಲಕ ರಿಸರ್ವ್ ಬ್ಯಾಂಕಿನ ಸಂಬಂಧಪಟ್ಟ ಪ್ರಾದೇಶಿಕ ಕಚೇರಿಗೆ ಸಲ್ಲಿಸತಕ್ಕದ್ದು.

3. ಅಧಿಕೃತ ವ್ಯಕ್ತಿಗಳು ಸುತ್ತೋಲೆಯಲ್ಲಿನ ಅಂಶಗಳನ್ನು ತಮ್ಮ ಸಂಬಂಧಪಟ್ಟವರ ಘಟಕಗಳ ಗಮನಕ್ಕೆ ತರತಕ್ಕದ್ದು.

4. ಈ ಸುತ್ತೋಲೆಯಲ್ಲಿ ಅಡಕವಾಗಿರುವ ನಿರ್ದೇಶನಗಳನ್ನು ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ, 1999 (1999ರ 42) ಪ್ರಕರಣ 10(4) ಮತ್ತು ಪ್ರಕರಣದ 11(1)ರ ಅಡಿಯಲ್ಲಿ ನೀಡಲಾಗಿದೆ.

ತಮ್ಮ ವಿಶ್ವಾಸಿ,

ಗ್ರೇಸ್ ಕೋಶಿ
ಮುಖ್ಯ ಪ್ರಧಾನ ವ್ಯವಸ್ಥಾಪಕರು.